ಕಲಿಯಲು ಬಂದು ಆಗಲೇ ಎರಡು ವರ್ಷ ಕಳೆದಿತ್ತು. ಅರ್ಧಮರ್ದ ಕನ್ನಡವನ್ನೂ ಕಲಿತಿದ್ದ. ಅವನ ಹರುಕು ಕನ್ನಡ ಮತ್ತು ಇವನ ಮುರುಕು ಹಿಂದಿಗಳೇ ಅವರಿಬ್ಬರನ್ನೂ ಗಟ್ಟಿ ಬೆಸೆದಿದ್ದವು. ಆದರೆ ಸ್ವಲ್ಪೇ ದಿನಗಳಲ್ಲಿ ಸದಾನಿಗೆ ಪಿ.ಜಿ. ಊಟ ಸೇರದೆ ಆರೋಗ್ಯ ಹದಗೆಟ್ಟಿತ್ತು. ಆದ್ದರಿಂದ ಅನಿವಾರ್ಯವಾಗಿ ಅಚ್ಯುತನೊಟ್ಟಿಗೆ ಮಲ್ಲೇಶ್ವರದ ರೇಲ್ವೆ ನಿಲ್ದಾಣದ ಸಮೀಪದಲ್ಲಿ ಕಟ್ಟಡವೊಂದರ ಮೂರನೇ ಮಹಡಿಯಲ್ಲಿ ಒಂದು ಸಿಂಗಲ್ ರೂಂ ಬಾಡಿಗೆ ಪಡೆದು ವಸತಿ ಬದಲಾಯಿಸಿದ್ದ. ತಮ್ಮದೇ ಜಾತಿಯವ ಎಂಬ ಒಂದೇ ಕಾರಣಕ್ಕೆ ಅಚ್ಯುತನೂ ಇವನೊಂದಿಗೆ ರೂಮು ಮಾಡಲು ಒಪ್ಪಿದ್ದ.

ರೂಮು ಬದಲಾದರೂ ವಿಪಿನ್ ಮತ್ತು ಸದಾನ ಸ್ನೇಹಕ್ಕೇನೂ ಅಡಚಣೆ ಬರಲಿಲ್ಲ. 'ಸದಾ ಭಾಯ್ ಆವೋ... ಆಜ್ ತುಮ್ಹೆ ಪಿಕ್ಚರ್ ದಿಖಾವೂಂಗಾ' ಎಂದು ಅವನು ಫೋನ್ ಮಾಡಿದನೆಂದರೆ ಸದಾ ಹಿಂದು ಮುಂದು ನೋಡದೆ ಹೊರಟುಬಿಡುತ್ತಿದ್ದ. ಹಾಗೆ ಹೊರಡುತ್ತಿದ್ದುದು ಸಿನಿಮಾ ಮಂದಿರಕ್ಕಲ್ಲ, ಯಾವುದೋ ಹಳೆಯ ಬಾರ್, ಪಬ್ಬು, ಪರಿಷೆ, ಲವ್ವರ್‌ಗಳೇ ಹೆಚ್ಚಾಗಿರುವ ಉದ್ಯಾನಗಳು ಎಲ್ಲವೂ 'ಪಿಕ್ಚರ್ ದಿಖಾವೂಂಗಾ'ದ ವ್ಯಾಪ್ತಿಯಲ್ಲಿ ಬರುತ್ತಿದ್ದವು.

ಅವತ್ತೂ ಹಾಗೆ, ಮುಸ್ಸಂಜೆಯ ಹೊತ್ತಿನಲ್ಲಿ ವಿಪಿನ್ ಫೋನ್ ಬಂದಿತ್ತು. 'ಈವತ್ತು ನಿಂಗೆ ಸ್ಪೇಷಲ್ ಪಿಕ್ಚರ್ ದಿಖಾವೂಂಗಾ' ಎಂದು ಸದಾನನ್ನು ಗಾಂಧಿನಗರದ ಯಾವುದೋ ಅಪರಿಚಿತ ಗಲ್ಲಿಗಳೊಳಗೆ ಕರೆದೊಯ್ದಿದ್ದ.

'ಎಲ್ಲಿಗೆ ಕರ್ಕೊಂಡೊಗ್ತಿದಿಯಾ ವಿಪಿನ್?...' ಕೇಳಿದ್ದಕ್ಕೆ ಪಟ್ಟನೆ ಕಣ್ಣು ಹೊಡೆದು ಬಲಗೈ ಬೆರಳನ್ನು ಗೋಲ ಮಡಚಿ ಅದರಲ್ಲಿ ಎಡಗೈ ತೋರುಬೆರಳನ್ನು ತೂರಿಸಿ ಆಶ್ಲೀಲ ಸನ್ನೆ ಮಾಡಿ ಕಿಸಕಿಸ ನಕ್ಕಿದ್ದ. ಸದಾಶಿವನಿಗೆ ಏನೋ ಹೊಳೆದಂತಾಗಿ ಗಕ್ಕನೆ ನಿಂತು ವಿಪಿನ್‌ನನ್ನೇ ನೋಡಿದ. 'ಅರೆಭಾಯ್... ಬುಡ್ಡೆ ಹೋ ಕ್ಯಾ...? ಈ ವಯಸ್ಸಲ್ಲಿ ಮಜ್ಜಾ ಮಾಡದೆ ಮುದುಕ ಆದ್ಮೇಲೆ ಕರೇಗಾ ಕ್ಯಾ? ಬಾ ಬಾ... ಎಲ್ಲದೂ ಎಕ್ಸಪೀರಿಯನ್ಸ್ ಆಗಬೇಕು' ಎಂದು ಕೈಹಿಡಿದು ಎಳೆದುಕೊಂಡೇ ಹೋಗಿದ್ದ. ಇವನಿನ್ನೂ ಅನುಮಾನಿಸುತ್ತಿರುವುದನ್ನು ಕಂಡು ಯಾವುದೋ ಮದ್ಯದಂಗಡಿ ಮುಂದೆ ನಿಲ್ಲಿಸಿ ರಮ್ಮಿನ ಬಾಟಲನ್ನು ಕೈಗಿಟ್ಟಿದ್ದ. ಅದನ್ನು ಎತ್ತಿ ಗಟಗಟನೆ ಬಾಯೊಳಗಿಳಿಸಿದ ಸದಾನಿಗೆ ಮೈಯೆಲ್ಲ ಬೆಚ್ಚಗಾದಂತಾಗಿ ಕಿವಿ ಗುಂಯ್ ಗುಟ್ಟಿತ್ತು. ವಿಚಿತ್ರ ಉಮೇದಿಯಲ್ಲಿ 'ಚಲೋ ವಿಪ್ಪು... ದೇಖತಾ ಹೂಂ ಕ್ಯಾ ಹೋಗಾ?...' ಎನ್ನುತ್ತಾ ವಿಪಿನ್‌ನನ್ನು ಅನುಸರಿಸಿದ್ದ.

ನಾಯಕ–ನಾಯಕಿಯರ ಆಯಕಟ್ಟಿನ ಜಾಗದಲ್ಲೇ ಸರೀ ಹರಿದ ಸಿನಿಮಾ ಪೋಸ್ಟರುಗಳು, ಉಚ್ಚೆ ವಾಸನೆಯ ಬೀದಿಗಳಲ್ಲಿ ಹಾದು ಅವರು ಅರೆ ಮಂಪರಿನಲ್ಲೇ 'ಲಕ್ಷ್ಮಿ ಲಾಡಜ' ಎಂದು ಬರೆದುಕೊಂಡಿದ್ದ ಹಳೆ ಕಟ್ಟಡದ ಎದುರು ನಿಂತಿದ್ದರು. ಸುತ್ತ ಮುತ್ತ ಒಮ್ಮೆ ಕಣ್ಣಾಡಿಸಿ 'ಯೆಸ್ ಯೆಸ್' ಎಂದು ಜಾಗದ ಗುರ್ತು ಹಿಡಿದು ಸಣ್ಣಗೆ ಸಿಳ್ಳೆ ಹಾಕುತ್ತಾ ಕತ್ತಲಲ್ಲಿಯೇ ಮೆಟ್ಟಿಲುಗಳನ್ನೇರತೊಡಗಿದ ವಿಪಿನ್‌ನನ್ನು ಸದಾನೂ ಹಿಂಬಾಲಿಸಿದ.

ಮೊದಲನೇ ಮಹಡಿಯಲ್ಲಿ ಒಬ್ಬಳು ವಯಸ್ಸಾದ ಹೆಂಗಸು ಮೆಟ್ಟಿಲ ಪಕ್ಕವೇ ಗೋಡೆಗೊರಗಿಕೊಂಡು ನಿಂತಿದ್ದಳು. ಬಾಯಿತುಂಬ ಕವಳ ತುಂಬಿಕೊಂಡಿದ್ದ ಅವಳೊಂದಿಗೆ ಕೆಳದನಿಯಲ್ಲಿ ಏನೇನೋ ಮಾತನಾಡಿದ ವಿಪಿನ್, ಕಡೆಗೆ ಕಿಸೆಯಿಂದ ನೋಟುಗಳನ್ನು ತೆಗೆದು ಸೊಂಟಕ್ಕೆ ಸುತ್ತಿಕೊಂಡಿದ್ದ ಅವಳ ಸೀರೆಯೊಳಗೆ ಆಳವಾಗಿ ಕೈತೂರಿಸಿ ಸಿಕ್ಕಿಸಿದ. 'ಥತ್ ಹಟ್...'